

ನೆನಪಾಯಿತು. ಇದಾದ ನಂತರ, ಹೊಟ್ಟೆ ತಾಳ ಹಾಕುತ್ತಿದ್ದರೂ ಗೋರ್ಜ್‌ನಿಂದ ಜಲಪಾತದ ಶಿಖರಕ್ಕೆ ಪಕ್ಕದ ಗುಡ್ಡದಲ್ಲಿ ನಿರ್ಮಿಸಿದ್ದ ಕಾಲ್ನಡಿಗೆ ಪಥ **Crows Nest**ನ ಮೆಟ್ಟಿಲುಗಳನ್ನು ಏರಿಳಿದೆವು.

ಊಟ ಮುಗಿಸಿ ನಾವು ಮರಳಿದ್ದು ಗೋಟ್ ಐಲ್ಯಾಂಡ್‌ಗೆ. ನಯಾಗರ ಫಾಲ್ಸ್‌ನ ಮ್ಯೂಸಿಯಂ ಹಾಗೂ ಅದರ ಚರಿತ್ರೆ ಕುರಿತಾದ ಸಾಕ್ಷ್ಯಚಿತ್ರವನ್ನು ಮಿನಿ ಥಿಯೇಟರ್‌ನಲ್ಲಿ ವೀಕ್ಷಿಸಿ, ಕೇವ್ ಆಫ್ ವಿಂಡ್ ಪಯಣಕ್ಕೆ ಹೆಜ್ಜೆಯನ್ನಿಟ್ಟೆವು. ಇದು ಕಾಲ್ನಡಿಗೆಯಲ್ಲಿ ಮರದ ಅಟ್ಟಣಿಗೆಗಳಲ್ಲಿ ಏರಿಳಿದು ಜಲಪಾತಕ್ಕೆ ತಲೆಯೊಡ್ಡುವ ಒಂದು ರೀತಿಯ ಸಾಹಸ ಕಾರ್ಯಕ್ರಮ. ನಮಗೆ ಕೊಟ್ಟ ಹಳದಿ ಬಣ್ಣದ ರೈನ್‌ಕೋಟ್ ಧರಿಸಿ ಜಲಪಾತದ ಬುಡದಲ್ಲಿ ಚಿತ್ರವಿಚಿತ್ರವಾಗಿ ನಿರ್ಮಿಸಿದ ಮರದ ಮೆಟ್ಟಿಲುಗಳನ್ನು ಸಮೀಪಿಸುತ್ತಿದಂತೆ ಅವ್ಯಾಹತವಾಗಿ ಬೀಳುತ್ತಿರುವ ನೀರಿನಿಂದ ಒದ್ದೆಯಾಗುತ್ತಿದ್ದ ಮೆಟ್ಟಿಲುಗಳೊಂದಿಗೆ ನಾವೂ ಒದ್ದೆಯಾದೆವು. ಹೆಬ್ಬಂಡೆಗಳಿಗೆ ಬಿದ್ದ ನೀರು ಮಂಜಿನ ಹನಿಗಳಾಗಿ ಮೇಲೇಳುತ್ತಿದ್ದವು.

ಜಲಪಾತದ ನೀರು ಗಾಳಿಯ ಸಂಪರ್ಕ ಪಡೆದು ಮಳೆಯಾಗಿ ನಮ್ಮ ಮೇಲೆ ಸಿಂಪಡಣೆ ಆಗುತ್ತಿತ್ತು. ನೀರಿನ ಹನಿಗಳ ಹಾದುಹೋದ ಸೂರ್ಯ ಕಿರಣಗಳು ಒಂದರ ಮೇಲೆ ಇನ್ನೊಂದು ಕಾಮನಬಿಲ್ಲುಗಳನ್ನು ಒಮ್ಮೆಗೇ ಮೂಡಿಸಿದವು. ಕಾಮನಬಿಲ್ಲು ಮಾತ್ರವಲ್ಲ, ಕಾಮನಬಿಲ್ಲಿನ ವೃತ್ತವನ್ನೂ ಕಂಡು ವಿಸ್ಮಯಗೊಂಡೆವು. ಮೆಟ್ಟಿಲುಗಳನ್ನು ಏರುತ್ತಾ ಮೇಲೆ ಬಂದರೆ ಅಟ್ಟಣಿಗೆಗಳ ಕೊನೆಯಲ್ಲಿದೆ ಹರಿಕೇನ್ ಡೆಕ್.

ಈ ಕಟ್ಟೆಯಲ್ಲಿ ನಿಂತಾಗ ಚಂಡಮಾರುತದ ಮಳೆ–ಗಾಳಿಗೆ ಸಿಲುಕಿದ ಅನುಭವ. ಕೆಲವರು ಭಯಪಟ್ಟು ಕಟ್ಟೆಯಲ್ಲಿ ನಿಲ್ಲದೆ ಮುಂದುವರಿದರೆ, ಕೆಲವರು ಪುನರಪಿ ತೆರಳಿ ಆನಂದಿಸಿದರು, ಹಿಂಜರಿಯುತ್ತಿದ್ದ ನಮ್ಮನ್ನೂ ಎಳೆದು ನಿಲ್ಲಿಸಿದರು. ಎಲ್ಲರೂ ಪೂರ್ಣ ಒದ್ದೆಯಾದೆವು. ಅಷ್ಟರಲ್ಲಿ ಸಂಜೆಯಾಗಿತ್ತು.

## ನಿಸರ್ಗ-ಮಾನವ ನಿರ್ಮಿತ ಸೌಂದರ್ಯ

ಪಯಣದ ಮುಂದಿನ ಭಾಗವಾಗಿ ನಾವು ಗ್ರೀನ್ ಐಲ್ಯಾಂಡ್ ಮೂಲಕ ಸೇತುವೆಗಳನ್ನು ದಾಟುತ್ತ ಹೋದುದರಿಂದ ಜಲಪಾತವಾಗಿ ಕೆಳಕ್ಕೆ ಬೀಳಲು ತೀವ್ರ ರಭಸದಿಂದ ಧಾವಿಸುವ ನಯಾಗರ ನದಿಯ 'ಅಮೆರಿಕನ್ ರ್‍ಯಾಪಿಡ್ಸ್' ಸೌಂದರ್ಯ ಕಂಡೆವು. ನದಿ ಬದಿಯಲ್ಲೇ ಮುಂದುವರಿಯುತ್ತಾ ಪ್ರಾಸ್ಪೆಕ್ಟ್ ಪಾಯಿಂಟ್‌ಗೆ ಬರುವಷ್ಟರಲ್ಲಿ ರಾತ್ರಿಯಾಯಿತು. ಜಲಪಾತಗಳ ಸೊಬಗು ಹಗಲಿನಲ್ಲಿ ಒಂದು ತೆರನಾದರೆ, ರಾತ್ರಿಯಲ್ಲಿ ಮತ್ತೂ ಸೊಗಸು. ಎದುರುಗಡೆ, ಕೆನಡಾ ದೇಶದ ಝಗಮಗಿಸುವ ಲಾಡ್ಜ್, ಹೋಟೆಲ್‌ಗಳು, ಆ ಬದಿಯಿಂದ ಹಾಯಿಸಿದ ವಿವಿಧ ಬಣ್ಣಗಳ ಬೆಳಕಿನಿಂದ ವರ್ಣರಂಜಿತವಾಗಿ ಬೆಳಗುವ ಮೂರು ಜಲಪಾತಗಳು, ಇದಕ್ಕೆ ಕಿರೀಟಪ್ರಾಯವಾಗಿ ಬಣ್ಣಬಣ್ಣದ ಸಿಡಿಮದ್ದು ಪ್ರದರ್ಶನ. ಜಗತ್ತಿನ ಹಲವೆಡೆಗಳಿಂದ ಬಂದ ಜನಸ್ತೋಮ. ಇವೆಲ್ಲವೂ ಮೇಳೈಸಿ ಸೃಷ್ಟಿಯಾದ ಮಾಯಾಲೋಕ. ತಡರಾತ್ರಿ ಹನ್ನೊಂದರವರೆಗೂ ನಿಸರ್ಗ–ಮಾನವ ನಿರ್ಮಿತ ಈ ವೈಭವ ನಮ್ಮನ್ನು ಹಿಡಿದಿರಿಸಿತ್ತು.

ಜಲಪಾತಗಳ ವೈಮಾನಿಕ ನೋಟಕ್ಕೆ ಜನರನ್ನು ಹೊತ್ತ ಹೆಲಿಕಾಪ್ಟರ್‌ಗಳು ದಿನಪೂರ್ತಿ ಹಾರಾಡುತ್ತಿದ್ದವು. ನಾವು ಆ ಸಾಹಸಕ್ಕೆ ಮನಸ್ಸು ಮಾಡಲಿಲ್ಲ. ಮರುದಿನ ಬೆಳಗ್ಗೆ ಮತ್ತೆ ಫಾಲ್ಸ್ ಪ್ರದೇಶ ಪ್ರವೇಶಿಸಿ ಶಟಲ್ ಪ್ರವಾಸದ ಅನುಭವ ಪಡೆದೆವು. ನಿಧಾನವಾಗಿ ಚಲಿಸುವ ತೆರೆದ ಟ್ರಾಮ್ ಹೋಲುವ ವಾಹನ, ಲೂಪ್ ರೀತಿ ದಿನವಿಡೀ ಸಂಚರಿಸಿ ನಮಗೆ ಬೇಕಾದಲ್ಲಿ ಇಳಿದು ನೋಡುವ ಸೌಲಭ್ಯ ಒದಗಿಸುತ್ತದೆ. ಥ್ರೀ ಸಿಸ್ಟರ್ಸ್ ಐಲ್ಯಾಂಡ್ ನಿಲುಗಡೆಯಲ್ಲಿ ಇಳಿದು, ಮೂರು ಕಿರುಸೇತುವೆಗಳಿಂದ ಜೋಡಿಸಲಾದ ಮೂರು ಕಿರುದ್ವೀಪಗಳಲ್ಲಿ ನಡೆದು, ಕಂಡ ಅಪಾರ ಜಲರಾಶಿಯ ನಿರಂತರ ಓಟದ ಕೆನಡಿಯನ್ ರ್‍ಯಾಪಿಡ್ಸ್ ದರ್ಶನದೊಂದಿಗೆ ನಯಾಗರ ಪ್ರವಾಸವನ್ನು ಸಂತಸದಿಂದ ಸಂಪನ್ನಗೊಳಿಸಿದೆವು.

ನಯಾಗರ ಚೆಲುವಿನ ಬಗ್ಗೆ ಎಷ್ಟು ಬರೆದರೂ, ಬಣ್ಣಿಸಿದರೂ, ಎಷ್ಟು ಫೋಟೊ ಕ್ಲಿಕ್ಕಿಸಿದರೂ ಅದರ ಸೊಗಸನ್ನು ಪದಗಳಲ್ಲಿ ಹಿಡಿದಿಡಲು ಅಸಾಧ್ಯ ಎನ್ನುವುದು ಪ್ರವಾಸದ ಅನುಭವ ದಾಖಲಿಸಲು ಹೊರಟ ನನಗೆ ಪದೇ ಪದೇ ಅರಿವಾದ ಸತ್ಯ.

ಪ್ರತಿಕ್ರಿಯಿಸಿ: **feedback@sudha.co.in**

